ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಪಶುಸಂಗೋಪನಾ ಮತ್ತು ಮುಜರಾಯಿ ಸಚಿವರು)

ಅ) ಹೌದು.

ಈ ದೇವಾಲಯಕ್ಕೆ ಆಗಮಿಸುವ ಭಕ್ತಾಧಿಗಳಿಗೆ ದೇವಾಲಯದ ಹತ್ತಿರ 4 ಸ್ಥಳಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಪ್ರಾಚ್ಯವಸ್ತು ಇಲಾಖೆಯಿಂದ 2 ಶೌಚಾಲಯಗಳ ವ್ಯವಸ್ಥೆ ಮಾಡಲಾಗಿದೆ.

ಆ) ಆಯುಕ್ತಾಲಯದಿಂದ ದಿನಾಂಕ:22.03.2011ರ ಸುತ್ತೋಲೆಯಲ್ಲಿ ಇಲಾಖಾ ವ್ಯಾಪ್ತಿಗೆ ಒಳಪಟ್ಟ ದೇವಾಲಯಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಆಯಾಯಾ ದೇವಾಲಯದ ಆರ್ಥಿಕ ಲಭ್ಯತೆ ವಾರ್ಷಿಕ ಆದಾಯದ ಮೇರೆಗೆ ಒದಗಿಸಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿರುತ್ತದೆ.

ದೇವಾಲಯಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲು ಜಿಲ್ಲಾಧಿಕಾರಿಗಳಿಗೆ ₹. 50.00 ಲಕ್ಷಗಳವರೆಗಿನ ಕಾಮಗಾರಿಗಳನ್ನು ಕೈಗೊಳ್ಳಲು ಅಧಿಕಾರ ಪ್ರತ್ಯೋಜಿಸಲಾಗಿದೆ.

ರಸ್ತೆ ಅಗಲೀಕರಣದಿಂದಾಗಿ ನೀಡಲಾಗಿರುವ ಪರಿಹಾರ

80 (92); ಶ್ರೀ ಮಕಬುಲ್ ಎಸ್. ಬಾಗವಾನ್

ಅ) ವಿಜಯಪುರ ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುವ ರಸ್ತೆಗಳ ಅಗಲೀಕರಣ Master Plan ಚಾಲನೆಯಲ್ಲಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಸ್ತೆ ಅಗಲೀಕರಣಕ್ಕೆ ಒಳಪಟ್ಟಂತಹ ಹಲವಾರು ಕಟ್ಟಡಗಳು ವಿಜಯಪುರ ಮಹಾನಗರ ಪಾಲಿಕೆಯಿಂದ ಲೀಸ್ ಪಡೆದಂತೆ ಮಾಲೀಕರು (Lease Holder)ಗಳಿಗೂ ಪರಿಹಾರ ಧನ ಕೊಡಲಾಗುವುದೇ;

ಇ) ಹಾಗಿದ್ದಲ್ಲಿ, ಇಲ್ಲಿಯವರೆಗೆ ಲೀಸ್ ಪಡೆದ ಮಾಲೀಕರುಗಳಿಗೆ ಎಷ್ಟು ಪರಿಹಾರದ ಹಣವನ್ನು ಸಂದಾಯ ಮಾಡಲಾಗಿದೆ? (ಫಲಾನುಭವಿಗಳ ಹೆಸರು, ವಿಳಾಸ ಹಾಗೂ ಪಡೆದಿರುವ ಹಣದ ವಿವರ ನೀಡುವುದು)

ಶ್ರೀ ವಿನಯಕುಮಾರ್ ಸೊರಕೆ (ನಗರಾಭಿವೃದ್ಧಿ ಸಚಿವರು)

ಅ) ಹೌದು

ಆ) ಲೀಸ್ ಅವಧಿ ಮುಗಿಯದ ಆಸ್ತಿಗಳ ಬಾಧಿತ ಕಟ್ಟಡಗಳಿಗೆ ಮಾತ್ರ ಮೌಲ್ಯಮಾಪನದನ್ವಯ ಪರಿಹಾರ ಧನ ಕೊಡಲಾಗುವುದು.

ಇ) ₹. 20,90,671 (ಕಟ್ಟಡಕ್ಕೆ ಮಾತ್ರ)
ಶ್ರೀ. ಎಂ.ಎಂ.ಪೀರಜಾದೆ
ಶ್ರೀ. ಬಿ.ಆರ್.ಪಾಟೀಲ್
ಶ್ರೀ. ಎಸ್.ಎಸ್.ಮಠ
ವಿಳಾಸ ಟೂರಿಸ್ಟ್ ಹೋಟೆಲ್ ಮಹಾತ್ಮ ಗಾಂಧಿ ರಸ್ತೆ, ವಿಜಯಪುರ.

ಇಲಾಖಾ ಪುನರಚನೆಯಿಂದಾಗಿರುವ ಗೊಂದಲ

81 (93); ಶ್ರೀ ಮಕಬುಲ್ ಎಸ್. ಭಗವಾನ್ [ಬಿಜಾಪುರ ನಗರ]

ಅ) ಕರ್ನಾಟಕ ರಾಜ್ಯದಲ್ಲಿ ಇಲಾಖಾ ಪುನರ್ ರಚನೆಯಿಂದ ಪಶುವೈದ್ಯಕೀಯ ಪರಿವೀಕ್ಷಕರಿಗೆ ಕೆಲಸಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಪಶುವೈದ್ಯಕೀಯ ಪರೀವೀಕ್ಷಕರಿಗೆ ಇಲಾಖೆ ಪುನರ್ ರಚನೆಯ ಗೊಂದಲವನ್ನು ಸರಿಪಡಿಸಿ, ಅವರಿಗೆ ಸ್ಥಳ ನಿಯೋಜಿಸಲು ಯಾವ ಕ್ರಮ ಕೈಗೊಳ್ಳಲಾಗುವುದು;

ಇ) ಇಲಾಖೆಯ ಪುನರ್ ರಚನೆಯ ಗೊಂದಲವನ್ನು ಶೀಘ್ರದಲ್ಲಿಯೇ ನಿವಾರಿಸಿ ಇವರಿಗೆ ಅನುಕೂಲ ಮಾಡಿಕೊಡಲಾಗುವುದೇ?